**ದಿನಾಂಕಃ 23.06.2025 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ** ಪ್ರತಿವಾದಿ ನಂ.1 ಮತ್ತು 2 ರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಪಾಟಿ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ನಂ.7(ಬಿ) ಯಿಂದ (ಇ) ರ ಪರ ಶ್ರೀ ಆರ್ ಕೆ ವಕೀಲರಿಂದ.**

ಬಸವರಾಜಪ್ಪ ಖರೀದಿ ಮಾಡಿದ ಆಸ್ತಿಯ ಕ್ರಯಪತ್ರ ನಿಡಿ-61 ಇರುತ್ತದೆ ಅಂದರೆ ಸರಿ. ನಮ್ಮದು ಶ್ರೀಮಂತ ಜಮೀನದಾರ ಕುಟುಂಬ ಇರುತ್ತದೆ ಅಂದರೆ ಸರಿ. 1974 ನೇ ಇಸವಿಯಲ್ಲಿ ಗೇಣಿ ಕಾಯ್ದೆ ಜಾರಿಗೆ ಬಂದಾಗ ಸಾಕಷ್ಟು ಜಮೀನು ಗೇಣಿದಾರರಿಗೆ ಹೋಗಿರುತ್ತವೆ ಅಂದರೆ ಸರಿ. ಗೇಣಿದಾರರಿಗೆ ಜಮೀನು ಹೋಗಿದ್ದರಿಂದ ನಮ್ಮ ಮನೆತನಕ್ಕೆ ಜಮೀನಿನಿಂದ ಬರುವ ಆದಾಯ ಕಡಿಮೆ ಆಗಿರುತ್ತದೆ ಅಂದರೆ ಸರಿ. ಆ ಕಾಲಕ್ಕೆ ಜಮೀನನ್ನು ಉಳಿಸಿಕೊಳ್ಳಲು ನಮ್ಮ ತಂದೆ ಸಿವಿಲ್ ನ್ಯಾಯಾಲಯ ಮತ್ತು ಹೈಕೊರ್ಟ ನಲ್ಲಿ ಸಾಕಷ್ಟು ಕೇಸ್ ದಾಖಲಿಸಿದ್ದರು ಅಂದರೆ ಸರಿ. ನಮ್ಮ ಕುಟುಂಬಕ್ಕೆ ಆದಾಯ ಕಡಿಮೆ ಆಗಿದ್ದರಿಂದ ಮತ್ತು ವ್ಯಾಜ್ಯ ಮಾಡುತ್ತಿದ್ದ ಕಾರಣ ಆರ್ಥಿಕ ನಷ್ಟ ಆಗಿರುತ್ತದೆ ಅಂದರೆ ಸರಿಯಲ್ಲ. ನಿಮ್ಮ ತಂದೆ ದಾವಾ ಎ ಶೆಡ್ಯೂಲ್ ಆಸ್ತಿಯ ಮೇಲೆ ಬ್ಯಾಕನಿಂದ ಸಾಲ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಿಪಿ-22 ರ ಕಾಲಂ ನಂ.11 ರಲ್ಲಿ ಜಮೀನಿನ ಮೇಲೆ ಬ್ಯಾಂಕ್ ಋಣಭಾರ ನಮೂದಾಗಿರುತ್ತದೆ ಅಂದರೆ ಸಾಕ್ಷಿ ನನ್ನ ತಂದೆಯ ಉಪಪತ್ನಿ ಕುಸುಮಾರವರು ಸಾಲ ಮಾಡಿರುತ್ತಾರೆ ಎನ್ನುತ್ತಾರೆ. ಬ್ಯಾಂಕ್ ನವರು ಸಾಲ ನೀಡಬೇಕಾದರೆ ದಾಖಲೆಗಳನ್ನು ಪರಿಶೀಲನೆ ಮಾಡಿ ಕಾನೂನು ತಜ್ಞರ ಅಭಿಪ್ರಾಯ ಪಡೆದು ನಿಯಮಾನುಸಾರ ಮಂಜೂರು ಮಾಡುತ್ತಾರೆ ಅಂದರೆ ಸರಿ. ನಿಪಿ-16 ರಿಂದ 25 ರ ಕಾಲಂ ನಂ.11 ರಲ್ಲಿ ಬ್ಯಾಂಕ್ ಋಣಭಾರ ನಮೂದಾಗಿರುತ್ತದೆ ಅಂದರೆ ಸರಿ. ದಾವಾ ಜಮೀನುಗಳನ್ನು ನಾವು ವೈಯಕ್ತಿಕವಾಗಿ ಸಾಗುವಳಿ ಮಾಡುತ್ತಿರಲಿಲ್ಲ ಕೃಷಿ ಕಾರ್ಮಿಕರ ಮೂಲಕ ಸಾಗುವಳಿ ಮಾಡುತ್ತಿದ್ದೇವು ಅಂದರೆ ಸರಿ. ಮಳೆ ಬರದೆ ಇದ್ದರೆ ಬೆಳೆ ಬಾರದೆ ನಷ್ಟ ಆಗುತ್ತದೆ ಅಂದರೆ ಸರಿ.

ಜಮೀನಿನಿಂದ ಆದಾಯ ಬರದೆ ಇದ್ದಾಗ ಬ್ಯಾಂಕ್ ಸಾಲ ಕಟ್ಟಲು ಆಗುತ್ತಿರಲ್ಲಿಲ್ಲ, ಬ್ಯಾಂಕ್ ಸಾಲ ಕಟ್ಟದೆ ಇರುವುದರಿಂದ ಸಾಲ ಹಾಗೆ ಬಾಕಿ ಉಳಿದಿರುತ್ತದೆ ಅಂದರೆ ಸಾಕ್ಷಿ ನನ್ನ ತಂದೆ ಜೀವಂತ ಇದ್ದಾಗ ಬ್ಯಾಂಕ್ ಗೆ ಸಾಲ ಕಟ್ಟಿರುತ್ತಾರೆ ಬಾಕಿ ಉಳಿಸಿರುವುದಿಲ್ಲ ಎನ್ನುತ್ತಾರೆ. ನಿಮ್ಮ ತವರು ಮನೆಯ ಆದಾಯ ಮತ್ತು ವೆಚ್ಚದ ಬಗ್ಗೆ ಗೊತ್ತಾ ಅಂದರೆ ಸಾಕ್ಷಿ ನನ್ನ ತಂದೆ ಮತ್ತು ನನ್ನ ಅಣ್ಣನಿಗೆ ಗೊತ್ತು ಎನ್ನುತ್ತಾರೆ. ನನ್ನ ಹಾಗೂ ನನ್ನ ಅಣ್ಣ-ತಮ್ಮ ಮತ್ತು ಅಕ್ಕ-ತಂಗಿಯರ ಮದುವೆಯಾಗಿರುತ್ತದೆ ಅಂದರೆ ಸರಿ. ನನ್ನ ತಂದೆ ಎಲ್ಲಾ ಮಕ್ಕಳಿಗೂ ಒಳ್ಳೆಯ ಶಿಕ್ಷಣ ಕೊಡಿಸಿ ಮದುವೆ ಮಾಡಿದ ಸಂಬಂಧ ಸಾಲವಾಗಿರುತ್ತದೆ ಅಂದರೆ ಸರಿಯಲ್ಲ. ನಿಡಿ-7 ಮತ್ತು ನಿಡಿ-61 ರ ಬಗ್ಗೆ ನಿಮ್ಮ ತಕರಾರು ಇರುವುದಿಲ್ಲ ಅಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ ಮಾರಾಟ ಮಾಡಿರುತ್ತಾರೆ ಹಾಗಾಗಿ ನನ್ನ ತಕರಾರು ಇರುತ್ತದೆ ಎನ್ನುತ್ತಾರೆ. ನಿಡಿ-7 ಮತ್ತು 61 ರಲ್ಲಿ ಮಾರಾಟ ಆದ ಜಮೀನುಗಳ ಬಗ್ಗೆ ನಿಮಗೆ ಗೊತ್ತಾದ ನಂತರ ನೀವು ಬ್ಯಾಂಕ್ ಗಳಿಗೆ ನೋಟೀಸ್ ಕೊಟ್ಟು ಆ ಜಮೀನುಗಳ ಮೇಲೆ ಸಾಲ ನೀಡಬೇಡಿ ಅಂತ ಕ್ರಮ ತೆಗೆದುಕೊಂಡಿಲ್ಲ ಅಂದರೆ ಸರಿ. ನಿಡಿ-7 ಆದ ನಂತರ ನೀವು ಏನಾದರೂ ಸಾರ್ವಜನಿಕ ನೋಟೀಸ್ ಕೊಟ್ಟು ನಮ್ಮ ಕುಟುಂಬದ ಜಮೀನುಗಳಿಗೆ ಸಂಬಂಧಪಟ್ಟಂತೆ ವ್ಯವಹಾರ ಮಾಡಬೇಡಿ ಎಂದು ಕೇಳಿರುತ್ತೀರಾ ಅಂದರೆ ಸಾಕ್ಷಿ ಆ ರೀತಿ ಸಾರ್ವಜನಿಕ ನೋಟೀಸ್ ಕೊಟ್ಟಿಲ್ಲ ಎನ್ನುತ್ತಾರೆ. ನಿಮ್ಮ ತಂದೆ ಜೀವಂತ ಇದ್ದಾಗ ಅವರು ಮಾಡಿದ ಜಮೀನಿನ ವ್ಯವಹಾರ ಮತ್ತು ಬ್ಯಾಂಕ್ ಸಾಲದ ಬಗ್ಗೆ ನೀವು ಲಿಖಿತ ತಕರಾರು ಮಾಡಿಲ್ಲ ಅಂದರೆ ಸರಿ. ನನ್ನ ತಂದೆಗೆ ದುಷ್ಚಟಗಳು ಇದ್ದವು ಮತ್ತು ಅವ್ಯವಹಾರ ಮಾಡಿರುತ್ತಾರೆಂದು ಈ ಕೇಸ್ ಗೋಸ್ಕರ ಬರೆಸಿರುತ್ತೇವೆ ಅಂದರೆ ಸರಿಯಲ್ಲ. ಮೃತ 7 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ನೋಡಿರುತ್ತೇನೆ ಎನ್ನುತ್ತಾರೆ. ಮೃತ 7 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನಿನ ಚೆಕ್ ಬಂದಿ ಗೊತ್ತಿಲ್ಲ ಅಂದರೆ ಸರಿ. ಮೃತ 7 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನಿನ ಮೇಲೆ 30-40 ಲಕ್ಷ ಹೂಡಿಕೆ ಮಾಡಿ ಅಭಿವೃದ್ಧಿ ಪಡೆಸಿರುತ್ತಾರೆ ಅಂದರೆ ಸರಿಯಲ್ಲ. ಮೃತ 7 ನೇ ಪ್ರತಿವಾದಿ ಪ್ರಾಮಾಣಿಕ

ಖರೀದಿದಾರ ಇರುತ್ತಾರೆ ಅಂದರೆ ಸರಿಯಲ್ಲ. 7 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನಿನ ಮೇಲೆ ಬ್ಯಾಂಕ್ ಸಾಲ ಮಾಡಿರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮೃತ 7 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನಿನ ಮೇಲೆ ನಮಗೆ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ದುರುದ್ದೇಶದಿಂದ ಮೃತ 7 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ ಅಂದರೆ ಸರಿಯಲ್ಲ. ನೀವು ನಿಮ್ಮ ತಂದೆಯ ಯೋಗಕ್ಷೇಮ ನೋಡಿರುವುದಿಲ್ಲ ಅಂದರೆ ಸಾಕ್ಷಿ ನಮ್ಮ ತಂದೆ ನಮ್ಮ ಜೊತೆಯಲ್ಲಿ ಇರಲಿಲ್ಲ ಎನ್ನುತ್ತಾರೆ.

**ಪಾಟಿ ಸವಾಲುಃ** ಪ್ರತಿವಾದಿ ನಂ.3 ರಿಂದ 6 ರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.